

ಹಸಿರ ಸಿರಿಯ ನಡುವಿನ ಹೆಮೆನ್ಲಿನ್ನ ಕೋಟೆ

# ಸ್ನಿಗ್ಧ ಸೌಂದರ್ಯದ ಖನಿ ಹೆಲ್ಸಿಂಕಿ

ಇನ್ನೂ ಬೆಳಕು ಬಿಡುವುದಕ್ಕೆ ಮೊದಲೇ ಎಸ್ಟೋನಿಯಾದ ರಾಜಧಾನಿ ಟ್ಯಾಲಿನ್‌ನಲ್ಲಿ ನಾವಿಳಿದುಕೊಂಡಿದ್ದ ಹೋಟೆಲ್‌ನಿಂದ ಹೊರಬಂದಿದ್ದೆವು. ನಮ್ಮ ಚೀಲಗಳನ್ನು ಬೆನ್ನಿಗೇರಿಸಿಕೊಂಡು ಜೊತೆಗೆ ವರ್ಷದ ಮಗಳನ್ನು ಅವಳ ತಳ್ಳುಗಾಡಿಯಲ್ಲಿ ಮಲಗಿಸಿಕೊಂಡು, ಹತ್ತಿರದಲ್ಲೇ ಇದ್ದ ಬಂದರಿನ ಕಡೆಗೆ ಹೆಜ್ಜೆ ಹಾಕಿದೆವು. ಆ ನಗರವಿನ್ನೂ ನಿದ್ರಾದೇವಿಯ ಮಡಿಲಲ್ಲಿ ಮಲಗಿತ್ತು. ರಸ್ತೆಗಳಲ್ಲಿ ಓಡಾಡುತ್ತಿದ್ದ ಒಂದೆರಡು ಕಾರುಗಳನ್ನು ಬಿಟ್ಟರೆ ಜನ ಸಂಚಾರವೇ ಇರಲಿಲ್ಲ. ಆದರೆ ಬಂದರು ಸಮೀಪಿಸಿದಂತೆ, ದೀಪಗಳನ್ನು ಬೆಳಗಿಸಿಕೊಂಡು ನಿಂತಿದ್ದ ಫೆರ್ರಿಗಳು, ಅವುಗಳನ್ನೇರಲು ಸರತಿ ಸಾಲಿನಲ್ಲಿ ಕಾಯುತ್ತಿದ್ದ ಕಾರುಗಳು, ಟ್ರಕ್ಕುಗಳು, ಅತ್ತಿಂದಿತ್ತ ಓಡಾಡುತ್ತಿದ್ದ ಜನರಿಂದ ಗಡಿಬಿಡಿಯ ವಾತಾವರಣ ಸೃಷ್ಟಿಯಾಗಿತ್ತು. ಅಲ್ಲಿದ್ದ ಫೆರ್ರಿಗಳಲ್ಲಿ ಫಿನ್‌ಲ್ಯಾಂಡ್ ದೇಶದ ರಾಜಧಾನಿ ಹೆಲ್ಸಿಂಕಿಗೆ ಹೋಗಲಿರುವುದ್ಯಾವುದೆಂದು ಹುಡುಕಿ ಒಳದಾಟಿದೆವು. ಅಲ್ಲೆಲ್ಲೋ ಕಿಟಕಿಯ ಪಕ್ಕದಲ್ಲಿದ್ದ ಸೀಟುಗಳಲ್ಲಿ ಕೂತು ಸುಧಾರಿಸಿಕೊಳ್ಳುವಷ್ಟರಲ್ಲಿ ನಮ್ಮ ಫೆರ್ರಿ ಟ್ಯಾಲಿನ್‌ನ ಸಮುದ್ರ ತೀರವನ್ನು ಬಿಟ್ಟು ಹೊರಟಿತ್ತು.

■ ಸುಚೇತಾ ಕೆ. ನಾರಾಯಣ್

ಬಾಲ್ಟಿಕ್ ಸಮುದ್ರ ವಿಶಾಲವಾಗಿ ಎದುರಿಗಿದ್ದರೆ, ಹಿಂದೆ ಟ್ಯಾಲಿನ್ ನಗರಿ ಕ್ಷಣ ಕ್ಷಣಕ್ಕೂ ಚಿಕ್ಕದಾಗಿ, ದಿಗಂತದ ಚುಕ್ಕೆಯಾಗಿ, ಕೊನೆಗೊಮ್ಮೆ ಕಣ್ಮರೆಯಾಯಿತು. ಬಾಲಸೂರ್ಯ ಮೆಲ್ಲಮೆಲ್ಲನೆ ತನ್ನ ಮೃದು ಕಿರಣಗಳನ್ನು ಚೆಲ್ಲುತ್ತಾ ಮೇಲೇರತೊಡಗಿದ್ದ. ಅವನಿತ್ತ ಹೊಂಬಣ್ಣವನ್ನು ತನ್ನ ಮೇಲೆಲ್ಲಾ ಬಳಿದುಕೊಂಡ ಕಡಲು ಫಳಫಳಿಸುತ್ತಿತ್ತು. ಆ ಹೊಳೆಯುತ್ತಿದ್ದ ನೀರನ್ನು ಇಬ್ಭಾಗ ಮಾಡಿಕೊಂಡು ನಡುವೆ ನಮ್ಮ ಬೋಟು ಚಲಿಸುತ್ತಿತ್ತು. ಅದೊಂದು ಮೋಡಿಯ ಗಳಿಗೆ. ಆ ಪ್ರಶಾಂತ ಸಮಯದಲ್ಲಿ ಕೆಲವರು ಕಿಟಕಿಯಾಚೆಗಿನ ಸೌಂದರ್ಯವನ್ನು ಕಣ್ಣು, ಫೋನುಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡುತ್ತಿದ್ದರೆ, ಇನ್ನು ಕೆಲ ಮಂದಿ ಪುಸ್ತಕ ಹಿಡಿದಿದ್ದರು.

ಬೆಳಗಿನ ಕಾಫಿ ಗುಟುಕರಿಸುತ್ತಾ ಕೂತವರು, ಕುಟುಂಬದೊಂದಿಗೆ ಹರಟೆ ಹೊಡೆಯುತ್ತಾ ಕುಳಿತವರು ಕೆಲವರಾದರೆ, ಇವನ್ನೆಷ್ಟು ಬಾರಿ ನೋಡಿಲ್ಲ ನಾನು ಎಂಬಂತೆ ಲ್ಯಾಪ್ಟಾಪ್‌ಗಳಲ್ಲಿ ಮುಳುಗಿ ಹೋದವರು ಹಲವರಿದ್ದರು. ಆ ಫೆರ್ರಿಯಲ್ಲಿ ಇದ್ದ ಅಂಗಡಿಗಳು, ಆಟದ ಕೋಣೆಗಳು ಇವನ್ನೆಲ್ಲ ಒಂದು ಸುತ್ತು ನೋಡಿಕೊಂಡು ಬಂದೆವು. ಟ್ಯಾಲಿನ್‌ನಿಂದ ಹೆಲ್ಸಿಂಕಿಗೆ ಸುಮಾರು 2ರಿಂದ 2.30 ಗಂಟೆಗಳ ಸಮುದ್ರಯಾನವಷ್ಟೇ. ಹಾಗಾಗಿ ಸಮಯ ಸರಿದದ್ದೇ ತಿಳಿಯಲಿಲ್ಲ. ದೂರದ ದಿಗಂತದಲ್ಲಾಗಲೇ ಫಿನ್‌ಲ್ಯಾಂಡ್‌ನಲ್ಲಿ ನೆಲ ಕಾಣತೊಡಗಿತ್ತು.

ಹೆಲ್ಸಿಂಕಿಯ ಬಂದರಿನಲ್ಲಿ ಇಳಿದಾಗ ಎದುರಾಗಿದ್ದು, ತಿಳಿಯಾದ ಬಣ್ಣಗಳ ಪುಟ್ಟ ಡಬ್ಬಿಗಳಂತಿದ್ದ ಕಟ್ಟಡಗಳ ಸಾಲು ಸಾಲು. ಅವುಗಳ ಮಧ್ಯೆ ಸ್ವಲ್ಪ ಎತ್ತರದ ಸ್ಥಳದಲ್ಲಿ ಬಿಳಿಯ ಹೊದಿಕೆಯಿದ್ದ ಹಸಿರ ಟೊಪ್ಪಿ ತೊಟ್ಟ ಹೆಲ್ಸಿಂಕಿ ಕ್ಯಾಥೆಡ್ರೆಲ್ ಗಮನಸೆಳೆಯುವಂತಿತ್ತು. ಹತ್ತಿರದಲ್ಲಿದ್ದ ಮಾರುಕಟ್ಟೆ ಬೆಳಗಿನ ವ್ಯಾಪಾರದ ಗಡಿಬಿಡಿಯಲ್ಲಿದ್ದರೆ, ದೊಡ್ಡ ತೊಟ್ಟಿಲ ಗಾಲಿಯೊಂದು ನಿಧಾನವಾಗಿ ಸುತ್ತುತ್ತಾ ಕೆಳಗಿದ್ದವರನ್ನು ಮೇಲೆ, ಮೇಲಿದ್ದವರನ್ನು ಕೆಳಗೆ ತಳ್ಳುತ್ತಿತ್ತು. ಅಲ್ಲೊಂದಷ್ಟು ಹಡಗುಗಳು ಲಂಗರು ಹಾಕಿ ನಿಂತಿದ್ದವು. ಸಣ್ಣ ಪುಟ್ಟ ಬೋಟುಗಳು ಅಲೆಗಳೇ ಇರದ ಶಾಂತ ಸಮುದ್ರದ ಮೇಲುಗಡೆ ತೇಲುತ್ತಿದ್ದವು. ಬಿಸಿಲು ತೆಳುವಾಗಿ ಹರಡಿ ಹೊತ್ತೇರಿದೆಯೆಂದು ಸೂಚಿಸುತ್ತಿತ್ತು. ಅಲ್ಲಿನ ಬಂದರಿನಿಂದ ಪಟ್ಟಣದ ಕೇಂದ್ರದೆಡೆಗೆ ಹೋಗಲು